

ಅರುಣ ಪಿ. ಭಟ್ಟ

## ವಾರದ ಭವಿಷ್ಯ 23.4.2020ರಿಂದ 29.4.2020ರವರೆಗೆ




ಅನಿರೀಕ್ಷಿತ ವಿವಾಹ ಪ್ರಸ್ತಾವ ಬರುವುದು. ಮನೆಯಲ್ಲಿನ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಲಾಭ. ನೌಕರಿಯಲ್ಲಿ ಪ್ರಮೋಷನ್. ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ.

ಶುಭದಿನ 25. ಶ್ರೀಕೃಷ್ಣ ಪೂಜೆ ಮಾಡಿರಿ. ತುಳಸಿ ಅರ್ಚನೆ ಮಾಡಿರಿ.




ಪ್ರಾರಂಭದ ಎರಡು ದಿನಗಳಲ್ಲಿ ಬಂಧುಗಳಿಂದ ಸುವಾರ್ತೆ. ಗೃಹ ನಿರ್ಮಾಣ ಕೆಲಸಗಳಲ್ಲಿ ಅನಿರೀಕ್ಷಿತ ಪ್ರಗತಿ. ನಿರುದ್ಯೋಗಿಗಳಿಗೆ ಸರ್ಕಾರಿ ಉದ್ಯೋಗ ಲಾಭ. ಸಂಗಾತಿಯ ಪೀಡೆ. ಧನಲಾಭ. ಮಿತ್ರರಿಂದ ಅಸಂತೋಷ.

ಶುಭದಿನ 26. ಕಾಲ ಭೈರವಾಷ್ಟಕ ಪಠಣ ಮಾಡಿರಿ.




ಬಹುದಿನಗಳ ಕಲಹಕ್ಕೆ ಮುಕ್ತಿ. ಸ್ಪರ್ಧಾತ್ಮಕ ಅಭ್ಯರ್ಥಿಗಳಿಗೆ ಉತ್ತಮ ಅವಕಾಶ. ಸರ್ಕಾರಿ ನೌಕರರಿಗೆ ಪದೋನ್ನತಿ ಯಶ ಐಚ್ಛಿಕ ಸ್ಥಳಕ್ಕೆ ಬದಲಾವಣೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನೀರಿಕ್ಷಿತ ಚಿಕ್ಕ ಪ್ರವಾಸ. ಕಾಗದ ಪತ್ರಗಳ ಕೆಲಸ.

ಶುಭದಿನ 26. ನವನಾಗ ನಾಮ ಸ್ತೋತ್ರ ಮಾಡಿರಿ.




ಸ್ವತಂತ್ರ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಲಾಭ. ವಿದ್ಯುತ್ ಕಾಮಗಾರಿಗೆ ಜನರಿಂದ ಪ್ರಶಂಸೆ. ಪ್ರವಾಸದಲ್ಲಿ ಜ್ವರ ಪೀಡೆ ಕಾಣಿಸೀತು ಎಚ್ಚರ ವಹಿಸಿ. ಮಕ್ಕಳು ಮುನಿಸಿಕೊಂಡಾರು. ಶತ್ರುಗಳ ಕಾಟ ನಡೆಯೋದಿಲ್ಲ. ಆರೋಗ್ಯ ಭಾಗ್ಯ.

ಶುಭದಿನ 28. ದತ್ತಾತ್ರೇಯ ಸ್ತುತಿ ಮಾಡಿರಿ.




ನೆನೆಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುವುವು. ಹೊಸ ನಿವೇಶನ ಖರೀದಿಗೆ ಸಕಾಲ. ಆದರೆ ಮನೆ ಬದಲಾಯಿಸಿದರೆ ತೊಂದರೆ. ನಿರೀಕ್ಷಿತವಾದ ಜನರಿಂದ ಮಾನ ಸನ್ಮಾನ. ಸಂಕಟದ ಮಧ್ಯೆ ಮಿಂಚುವಿರಿ. ಉದರ ದೋಷ.

ಶುಭದಿನ 23. ದಶರಥ ವಿರಚಿತ ಶನಿ ಸ್ತೋತ್ರ ಮಾಡಿರಿ.




ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ ಒಂದೊಂದಾಗಿ ಕರಗುವುವು. ಸೇವಕರು ತಳ ಕೀಳುವರು. ಹೆಂಡತಿಗೆ ತವರುಮನೆ ವಾಸ. ವಿವಾಹ ಪ್ರಸ್ತಾಪಕ್ಕೆ ಅನುಕೂಲ. ಮೋಜಿಗಾಗಿ ಖರ್ಚು. ಕಾಲು ನೋವು.

ಶುಭದಿನ 27. ನವಧಾನ್ಯಗಳನ್ನು ಈಶ್ವರ ಗುಡಿಗೆ ನೀಡಿರಿ.




ಸರ್ವ ಪ್ರಕಾರದಿಂದ ಉತ್ತಮ. ದೇವಾಲಯ ಪ್ರಮುಖರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ, ಸಾಮಾಜಿಕ ಮನ್ನಣೆ ಸಿಲಿದೆ. ವ್ಯಕ್ತಿತ್ವದ ಛಾಪು ಒತ್ತುವಿರಿ. ಹೊಸ ಮಿತ್ರರಿಂದ ಲಾಭ.

ಶುಭದಿನ 25. ಬ್ರಹ್ಮೋತ್ತರ ಖಂಡ ಪಠಿಸಿರಿ.




ಸಾಡೇಸಾತಿ ಐದು ತಿಂಗಳಿದೆ. ಸ್ಥಿರ ನೌಕರಿ ಪ್ರಾಪ್ತಿ. ಸತತ ಪ್ರವಾಸ. ಉನ್ನತ ಅಧಿಕಾರ ಪ್ರಾಪ್ತಿ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ.

ಶುಭದಿನ 27. ಸುದರ್ಶನ ಜಪ 1200 ಮಾಡಿರಿ.




ವಿದೇಶ ಗಮನದ ಯತ್ನ ಯಶ ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ಬಗ್ಗೆ ಸುವಾರ್ತೆ ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ.

ಶುಭದಿನ 28. ಕುಲದೇವತಾ ಪ್ರಾರ್ಥನೆ ಮಾಡಿರಿ.




ಏಕಾದಶ ಗುರುವಿನ ಅನುಗ್ರಹ ಒಂದು ಬಿಟ್ಟರೆ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುವವು. ಬಂಧುಗಳು ಶತ್ರುಗಳೊಡನೆ ಸೇರುವರು. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಎಚ್ಚರದಿಂದ ವ್ಯವಹರಿಸಿ.

ಶುಭದಿನ 26. ನವಗ್ರಹ ಶಾಂತಿ ಮಾಡಿಸಿ.




ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ. ಕೆಲಸದಲ್ಲಿ ಪದೋನ್ನತಿಯಾಗುವುದು. ಐಚ್ಛಿಕ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ. ಲಗ್ನ ಪ್ರಯತ್ನದಲ್ಲಿ ಯಶಸ್ಸು.

ಶುಭದಿನ 26. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿರಿ.




ನವ ವಿವಾಹಿತರಿಗೆ ಸಂತತಿ ಪ್ರಾಪ್ತಿಯ ಲಕ್ಷಣ. ಅನೇಕ ದಿನಗಳ ನಿರುದ್ಯೋಗ ಸಮಸ್ಯೆ ಬಗೆಹರಿಯುವುದು. ಹೊಟ್ಟೆಕಿಚ್ಚಿನ ಜನರಿಂದ ಪರೋಕ್ಷ ತೊಂದರೆ. ಎಲ್ಲ ಕೆಲಸಗಳಿಂದ ಧನಲಾಭ. ಷೇರು ವ್ಯವಹಾರದಾರರಿಗೆ ಬಂಡವಾಳದ ಹಿಡಿತವಿರಲಿ.

ಶುಭದಿನ 28. ಗಣಪತಿಗೆ 1008 ದೂರ್ವಾರ್ಚನೆ ಮಾಡಿರಿ.

